ತಾರೀಖು 3ನೆ ಜನವರಿ 1907.

ನಂ. 5968—ಸ್ಯಾನಿಟರಿ 141-06—4, ತುಮಕೂರು ಡಿಸ್ಟ್ರಿಕ್ಟ್‌ನಲ್ಲಿರುವ ಇದರಡಿ ನಮೂದಿಸಿರುವ ಸ್ಥಳಗಳಿಗೆ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬಂದೊದರ ಪಕ್ಕದಲ್ಲಿಯೂ ನಮೂದಿಸಿರುವ ಜಾತ್ರೆ ಮೊದಲಾದ ಕಾಲಗಳಲ್ಲಿ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಆ ಸ್ಥಳಗಳಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮ್ಮ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ :—

ಜಾತ್ರೆಯ ಹೆಸರು.	ನಡೆಯುವ ಸ್ಥಳ.	ತಾಲ್ಲೂಕು.	ತಾರೀಖು.	
			ಇಂದ.	ಗೆ.
1. ಶ್ರೀಗುರು ಗುಂಡಬ್ರಹ್ಮೇಶ್ವರ ಜಾತ್ರೆ.	ಪಾಟನಾಯಕನಹಳ್ಳಿ ...	ಸೀರ್ಯ ...	18—1—07	28—1—07
2. ಶ್ರೀ ನರಸಿಹ್ಮಸ್ವಾಮಿ ರಥೋತ್ಸವ ಮತ್ತು ಜಾತ್ರೆ.	ಸೀಬಿ ...	ಡಿಟೋ ...	1—2—07	25—2—07

1897ನೆಯ ಪರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಶ್ರೀಮ್ಮ ಮಹಾರಾಜರವರ ಸರ್ಕಾರದವರು ಪೈಕಿ ಬಂದು ಜಾತ್ರೆಯ ಪಕ್ಕದಲ್ಲಿಯೂ ನಮೂದಿಸಿರುವ ತಾರೀಖುಗಳಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಆ ಜಾತ್ರೆಯ ಸ್ಥಳಕ್ಕೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರನಾಮೆಗೆ ವಿರೋಧವಾಗಿ ಮೇಲ್ಕಂಡ ಜಾತ್ರೆಗಳಿಗೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 3ನೆ ಜನವರಿ 1907.

ನಂ. 6010—ಸ್ಯಾನಿಟರಿ 134-06—6, ಸಮಸ್ತ ಜನರ ತಿಳಿವಳಿಕೆಯ ಬ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ತುಮಕೂರು ಡಿಸ್ಟ್ರಿಕ್ಟ್‌ನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ಪರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟನಲ್ಪಟ್ಟ ರೆಗ್ಯುಲೇಷನ್ಸುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಆಲದಕಟ್ಟೆ. ...	ಚಿಕ್ಕನಾಯಕನಹಳ್ಳಿ.

ತಾರೀಖು 3ನೆ ಜನವರಿ 1907.

ನಂ. 6012—ಸ್ಯಾನಿಟರಿ 21-06—58, ಸಮಸ್ತ ಜನರ ತಿಳಿವಳಿಕೆಯ ಬ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮದರಾಸು ಸರ್ಕಾರದವರು ಇದರಡಿ ನಮೂದಿಸಿರುವ ನೆಂತೆ ಮತ್ತು ಉತ್ಸವಕ್ಕೆ ಯಾತ್ರೆ ಹೋಗುವದನ್ನು ನಿಷೇಧಿಸಿರುತ್ತಾರೆ.

ಜಾತ್ರೆಯ ಹೆಸರು.	ಸ್ಥಳ	ತಾಲ್ಲೂಕು	ಡಿಸ್ಟ್ರಿಕ್ಟ್	ತಾರೀಖು		ಅಧಿಕಾರ
				ಇಂದ	ಗೆ	
ಮೈಲಾರಲಿಂಗಪ್ಪನ ಜಾತ್ರೆ ಅಥವಾ ಕಾರಣೀಕೋತ್ಸವ.	ಮೈಲಾರ	ಹಡಗಲ್ಲಿ	ಬಳ್ಳಾರಿ.	15-1-07	10-2-07	ಫರ್ಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ 1906ನೆ ಇಸವಿ ಡಿಸೆಂಬರು 24ನೆ ಮಕ್ಕಂ 1360ನೆ ಮೆಮೊ ಪ್ರಕಾರ.

ತಾರೀಖು 4ನೆ ಜನವರಿ 1907.

ನಂ. 6056—ಸ್ಯಾನಿಟರಿ 66-06—22, ಸಮಸ್ತ ಜನರ ತಿಳಿವಳಿಕೆಯ ಬ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಹಾಸನ ಡಿಸ್ಟ್ರಿಕ್ಟ್‌ನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ಸ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ, 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21—96 ಈ ನಂಬರುಗಳ ಇಸ್ತಿಹಾರನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನ್ಸುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಜನ್ನಾಪುರ ...	ಬೇಲೂರು.
ಮಡಬಕೊಪ್ಪಲು ...	ಚನ್ನರಾಯಪಟ್ಟಣ.
ಗ್ರಾಮ	ಹಾಸನ.
ಪೊಡ್ಡಿಬಸವೆನಹಳ್ಳಿ ...	ಡಿಟೋ.
ಹೊಳೆನರಸಿಪುರ ಟೌನ್	ಹೊಳೆನರಸೀಪುರ.